ಕುಂಟ ದಿಗಂತದ ಬೆನ್ನ ಮೇಲೆ ನಡೆಯುತ್ತಿರುವಂತೆ ಕಂಡ.

ಬಂಡಿ ಅನಂತತೆಯ ವಿಳಾಸವ ಬಿರುಗಾಳಿಯ ಜೊತೆ ವಿಚಾರಿಸುತ್ತಿತ್ತು. ಕಪ್ಪುಮೋಡಗಳು ದಂಗೆ ಎದ್ದಂತೆ ಒಟ್ಟಾಗಿ ಓಡುತ್ತಿದ್ದವು. ಬಹುದೂರಕ್ಕೆ ಬಂದಿದ್ದರು. ಮೂರು ಲೋಕವನ್ನೂ ದಾಟಿ ಬಂದಿದ್ದರೂ ಈ ಲೋಕ ಮುಗಿಯುತ್ತಲೇ ಇಲ್ಲವಲ್ಲಾ... ಮೂರು ದಿನದ ಸಂತೆ ಎಂದುಕೊಂಡರೆ... ಈ ತಾರೆಗಳು ಸಂತೆಯನ್ನೇ ಮುಗಿಸಿಲ್ಲವಲ್ಲಾ ಎಂದು ಕಲ್ಪನೆಗಳಲ್ಲಿ ತಲ್ಲೀನರಾಗಿದ್ದರು. ಆಗಸದಿಂದ ಇಳಿಸಂಜೆ ಆ ನಿರ್ಜನ ಬಟಾಬಯಲಿಗೆ ಬಂದು ಆವರಿಸುತ್ತಿತ್ತು. ವಿಚಿತ್ರ ನಿಗೂಢ ಸದ್ದು ಒಂದೇ ಸಮನೆ ಗುಯ್ ಎಂದು ಬರುತ್ತಲೇ ಇತ್ತು. ಭೂಮಿಯೋ ಈ ಸೂರ್ಯನನ್ನು ಲಕ್ಷಾಂತರ ವರ್ಷಗಳಿಂದ ಸುತ್ತುತ್ತಲೇ ಇದೆ... ಇಲ್ಲಿ ಯಾವುದು ಅಸ್ತಿತ್ವ, ಅನಂತ, ಎಂದು ನಿಟ್ಟುಸಿರು ಬಿಡುತ್ತಿದ್ದರು.

ಈ ಲೋಕವನ್ನು ದುಃಖ ಬೆಳೆಸಿದಷ್ಟು ವಿಚಾರಗೊಳಿಸಿದಷ್ಟು ಸುಖ, ಸಂತೋಷ ವಿಸ್ತರಿಸಿ ಕಾಪಾಡಿಲ್ಲ ಅಲ್ಲವೇ ಎಂದು ಸವಾರ ಕೇಳಿದ.

'ಹೌದು ಅಣ್ಣಾ; ನನಗೆ ಸುಖದ ಎಲ್ಲ ಕಥೆಗಳನ್ನು ಒಂದೇ ವಾಕ್ಯದಲ್ಲಿ ಮುಗಿಸಬಹುದು ಎನಿಸುತ್ತದೆ. ಹಗಲನ್ನು ಒಮ್ಮೆ ದಿಟ್ಟಿಸಿ ನೋಡಿದರೆ ಸಾಕು... ಆದರೆ ರಾತ್ರಿ ಇದೆಯಲ್ಲಣ್ಣಾ... ಅದನ್ನು ಎಷ್ಟು ಸಲ ಹೇಗೆ ನೋಡಿದರೂ ಅದು ತನ್ನ ರಹಸ್ಯವನ್ನು ಬಿಟ್ಟುಕೊಡೋದೇ ಇಲ್ಲ.' 'ಅದು ಒಂಥರಾ ಸಾವು ಇದ್ದಂತೆ ಅಲ್ಲವೇನೋ...' 'ಹೂಂನಣ್ಣಾ... ಆದರೆ ಒಂದು ರಾತ್ರಿ ಒಂದೇ ರಾತ್ರಿ ಅಲ್ಲ. ಹಗಲೂ ಹಾಗೆಯೇ... ಒಮ್ಮೊಮ್ಮೆ ರಾತ್ರಿಯ ಮುಂಜಾವಿಗೂ ಹಗಲಿನ ಸಂಜೆಗೂ ವ್ಯತ್ಯಾಸವೇ ಕಾಣದು. ರಾತ್ರಿ ಬರ್ತಾನೇ ಇರ್ತದೆ. ಹಾಗೇ ಹುಟ್ಟಿದವರೆಲ್ಲ ದಿನನಿತ್ಯ ಸಾವಿಗೆ ಒಂದೊಂದೇ ಹೆಜ್ಜೆ ಎತ್ತಿ ಮುಂದಿಟ್ಟು ಕಾಲ ಮುಗಿಸುತ್ತಿರುತ್ತಾರೆ. ಅಂತಾದ್ರಲ್ಲಿ ನಮ್ಮದೇನಣ್ಣಾ... ಕಳೆದುಕೊಳ್ಳುವುದರಲ್ಲಿ ತುಂಬಾ ತುಂಬಾನೆ ಪಡ್ಕೊಳ್ಳೋದು ಇರ್ತದಣ್ಣ. ನಾವು ಪಡೆದುಕೊಂಡೆವು ಎಂಬುದೆಲ್ಲ ಹುಸಿ ಅಣ್ಣ. ಅಲ್ಲಿ ಕಳೆದುಕೊಳ್ಳೋದೇ ಹೆಚ್ಚು. ಏನೂ ಪಡೆದು ಬರಲಿಲ್ಲ; ಖಾಲಿ ಖಾಲಿ ಅನ್ನೋದೇ ವಿಮೋಚನೆ... ಸುಖ... ಇದೇ ಅನ್ಸತ್ತೆ; ನಾನೇಳೋದ್ರಲ್ಲಿ ತಪ್ಪಿದೆ ಏನಣ್ಣಾ...?', 'ಇಲ್ಲಇಲ್ಲ ನಿನ್ನ ಮಾತು ಸರಿ. ಕೊಡೋದರಲ್ಲಿ ಇರೋ ಸುಖ ಪಡೆದುಕೊಂಡದ್ದರಲ್ಲಿ ಇರೋದಿಲ್ಲ.' 'ಆದ್ರೆ... ಈ ಸಾವು ಹೆಂಗಿದೆ ನೋಡಣ್ಣಾ... ಅದು ಏನನ್ನೂ ಕೊಡೋದು ಇಲ್ಲ. ಕಿತ್ತುಕೊಳ್ಳೋದೂ ಇಲ್ಲ... ಸಾವೇ ಸುಂದರವಾಗಿದೆ ಅನ್ಸತ್ತೆ...' 'ಸರಿಸರೀ... ಸಾವು ಒಂದು ಸತ್ಯ. ಅದರ ಆಚೆ ತುದಿಯೇ ಗೊತ್ತಾಗೋದಿಲ್ಲ. ಆದರೆ ಈ ಲೋಕ ಸಾವನ್ನು ಕೆಡಿಸಿಬಿಟ್ಟದೆ. ಯೋಗ್ಯವಾಗಿ ಯಾರು ತಾನೇ ಈಗ ಸಾಯ್ತಾರೆ. ಸಾಯುವ ದಾರಿಗಳನ್ನೇ ನಾವು ಬರ್ಬರ ಗೊಳಿಸಿದ್ದೇವೆ. ಅಯೋಗ್ಯವಾಗಿ ಸಾಯೋರೆ ಹೆಚ್ಚು. ಸಾವಿಗೂ ನೀತಿ ಇದೆ. ಈಗೆಲ್ಲ ಅಕ್ರಮ ಸಾವುಗಳು. ಈ ಲೋಕ ಯುದ್ಧಗಳಿಂದ ಸಾವಿನ ಅರ್ಥವನ್ನೇ ಬದಲಿಸಿಬಿಟ್ಟದೆ. ನಾನು ಸವಾರ ಯಾಕಾದೆ ಅಂದರೆ ಸಾವಿನ ಸುಂದರ ದರ್ಶನವನ್ನು ಕಾಣಲು ಸಾಧ್ಯವೇ ಎಂಬ ಆಸೆಯಿಂದ. ಈ ತನಕ ಅದು ಕಂಡೇ ಇಲ್ಲ...'. 'ಸಾವು ಕೂಡ ಒಂದು ಭ್ರಮೆ ಅಣ್ಣಾ... ವಿಮೋಚನೆ ಇರಬಹುದು ಅನ್ಸತ್ತೆ; ಆದರೆ ಅದಲ್ಲ... ಹುಟ್ಟಿದ್ದು ಒಂದು ರೂಪದಲ್ಲಿ ಸಾಯೋದು ಇನ್ನೊಂದು ಸ್ವರೂಪದಲ್ಲಿ. ಒಂದಕ್ಕೊಂದು ಸಂಬಂಧ ಇದೆ ಅನ್ಸತ್ತೆ.' 'ಇರಲ್ಲ ಅಣ್ಣಾ... ಆಗ ನಾನು ತಾಯಿ ತೊಟ್ಟಿಲಲ್ಲಿ ಇದ್ದೆನಲ್ಲಾ... ಆ ಮೇಲೆ ಬೆಳೆದೆ ಎಂದುಕೊಂಡೆನಲ್ಲಾ... ವಿಚಿತ್ರ ಅಣ್ಣಾ... ಆ ಬಾಲಕ ಎಂದೋ ಸತ್ತು ಹೋಗಿದ್ದಾನೆ. ನೆನಪು ಮಾತ್ರ ಇದೆ. ಈ ನೆನಪು ಜೀವನಾನುಭವ ಎಂದರೆ ಅನುಭವ... ಇಲ್ಲ ಎಂದರೆ ಇಲ್ಲ. ಈಗ ಇಲ್ಲಿದ್ದ ಗಾಳಿಯ ನಾನು ಉಸಿರಾಡಿಬಿಟ್ಟೆ... ಅಷ್ಟೇ... ಮತ್ತೆ ಅದು ನನ್ನದಾಗದು. ನಾನು ನಾನೇ ಅಲ್ಲ. ನಾನು ಎನ್ನುವುದು ಸಾವಿರಾರು ರೂಪ. ನನ್ನೊಳಗೆ ಎಷ್ಟು ಕಾಲದ ಅನಾದಿ ಪೂರ್ವಿಕರು ಮಲಗಿದ್ದಾರೋ ಏನೋ... ಅವರ ಯಾವ ರೂಪವೂ ಕಾಣುವುದಿಲ್ಲ. ಜೀವ ಕೂಡ ಒಂದು ಕನ್ನಡಿ ಇದ್ದ ಹಾಗೆ. ಅದು ತನ್ನ ರೂಪವ ತಾನು ಕಾಣದು. ಆದರೆ ಇತರರ ಮುಖವ ಚೆನ್ನಾಗಿಯೇ ತೋರುತ್ತದೆ. ಕನ್ನಡಿಯ ಚೂರುಗಳು ನಾವು ಅಣ್ಣಾ... ನನ್ನ ಕನ್ನಡಿಯಲ್ಲಿ ನನ್ನ ಲೋಕ ಮಾತ್ರ ಕಾಣಿಸ್ತದೆ. ಅದಕ್ಕೆ ಅದು ಯಾವತ್ತೂ ಸ್ವತಂತ್ರ ಅಲ್ಲ. ಇಲ್ಲಿ ಯಾವುದೂ ನಮ್ಮ ಸ್ವಂತದ್ದಲ್ಲ... ನಕಲು,